# ಸ್ವಾಮಿ ಭೂತೇಶಾನಂದ

## (೧೯೦೧-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

### ಭಾಗ-೨

೧೯೭೦ರ ಸೆಪ್ಟೆಂಬರ್‌ನಲ್ಲಿ ಕೆಲವು ದಿನಗಳು ಬಿಡದೆ ಮಳೆ ಬರುತ್ತಿದ್ದು ಪೂರ್ವ ಕಲ್ಕತ್ತ ಮುಳುಗಿಹೋಗಿತ್ತು. ನಾವು ಅದ್ವೈತ ಆಶ್ರಮದಿಂದ ಪರಿಹಾರ ಕಾರ್ಯಗಳನ್ನು ಕೈಗೊಂಡೆವು. ಮಹಾರಾಜರು ಆಗ ಮಠದಲ್ಲಿ ರಿಲೀಫ್ ಇನ್‌ಚಾರ್ಜ್ ಆಗಿದ್ದರು. ಅಕ್ಕಿ, ಬೇಳೆ, ಬ್ರೆಡ್ ಕೊಂಡುಕೊಳ್ಳಲು ಹಣವನ್ನು ಕೇಳಿದಾಗ ಅವರೆಂದರು, ''ಹೃದಯವಂತಿಕೆ ಒಳ್ಳೆಯದು. ಆದರೆ ಹಣಕಾಸಿನ ಲೆಕ್ಕ ಸರಿಯಾಗಿ ಇಡಬೇಕು. ಜನರಿಗೋಸ್ಕರ ಕೊಟ್ಟ ದಾನವನ್ನು ಜನಸೇವೆಗಾಗಿಯೇ ಖರ್ಚು ಮಾಡಬೇಕು, ನೀನು ಕೊಡಬೇಕಾದುದೆಂದರೆ ನಿನ್ನ ಪ್ರೀತಿ ಹಾಗೂ ನಿಃಸ್ವಾರ್ಥ ಸೇವೆ.''

ಒಂದು ದಿನ ಕಾಂಕುರಗಾಛಿಯಲ್ಲಿ ಮಹಾರಾಜರನ್ನು ಕೇಳಿದೆ, ''ಸ್ವಾಮೀಜಿಯವರು 'ಮನುಷ್ಯನನ್ನು ತಯಾರು ಮಾಡುವ ಧರ್ಮ' ಎಂದು ಹೇಳಿದ್ದಾರಲ್ಲ. ಅದು ಹೇಗೆ ಸಾಧ್ಯ?'' ಅವರು ನೀಡಿದ ಉತ್ತರ ಹೀಗಿತ್ತು: ''ಒಬ್ಬರು ಇನ್ನೊಬ್ಬರನ್ನು ಬಲವಂತವಾಗಿ ಧಾರ್ಮಿಕನಾಗಿಸಲಾಗದು. ಅದಕ್ಕೆ ಆವಶ್ಯಕವಾದ ವಾತಾವರಣವನ್ನು ಕಲ್ಪಿಸುವುದು ನಮ್ಮ ಕೆಲಸ. ಆ ಆಧ್ಯಾತ್ಮಿಕ ವಾತಾವರಣದೊಳಗೆ ಬಂದವರು ಮಾತ್ರವೇ ಉನ್ನತ ಭಾವದಿಂದ ಪ್ರೇರಿತರಾಗಿ ತಮ್ಮ ಜೀವನವನ್ನು ಆ ಪಥದಲ್ಲಿ ನಡೆಸುವರು. ಇದೇ 'ಮನುಷ್ಯನನ್ನು ತಯಾರು ಮಾಡುವ ಧರ್ಮ.' ''

ಮತ್ತೊಂದು ದಿನ ಹೇಳಿದೆ, ''ಗಾರ್ಗಿಯು ಯಾಜ್ಞವಲ್ಕ್ಯರಿಗೆ ತಾನು ಎರಡು ಬಾಣಗಳನ್ನು ಹೂಡುವುದಾಗಿ, ಅಂದರೆ, ಎರಡು ಪ್ರಶ್ನೆಗಳನ್ನು ಕೇಳುವವಳೆಂದು ಹೇಳುತ್ತಾಳೆ. ನಾನು ನಿಮಗೆ ಮೂವತ್ತನಾಲ್ಕು ಬಾಣಗಳನ್ನು ಹೂಡುವೆ – ಇವುಗಳು 'ವಚನ ವೇದ'ದಲ್ಲಿ ಹೇಳಿರುವ ಸುಲಭವಾಗಿ ಅರ್ಥವಾಗದ ಶಬ್ದಗಳು. ಅವುಗಳಿಗೆ ಉತ್ತರಿಸಿ.'' ನಕ್ಕು ಅವರೆಂದರು, ''ನಾನು ನಿನ್ನ ಎಲ್ಲಾ ಬಾಣಗಳನ್ನೂ ತುಂಡರಿಸುವೆ.'' ನಾನು ಪ್ರಶ್ನೆಗಳನ್ನು ಬರೆದು ತೆಗೆದುಕೊಂಡು ಹೋಗಿದ್ದೆ. ಅವರು ಸಂತೋಷದಿಂದ ಒಂದಾದ ಮೇಲೊಂದು ಉತ್ತರವನ್ನು ನೀಡಿದರು. ಈ ಪ್ರಶ್ನೋತ್ತರಗಳು ಈಗಲೂ ನನ್ನ ಬಳಿಯಲ್ಲಿವೆ.

ಕಾಂಕುರಗಾಛಿಯಲ್ಲಿ ಮಹಾರಾಜರು ಆಧ್ಯಾತ್ಮಿಕ ವಾತಾವರಣವನ್ನು ಸೃಷ್ಟಿಸಿದ್ದರು. ಸಾಯಂಕಾಲ ಅನೇಕ ಭಕ್ತರು ಬಂದು ಸೇರುತ್ತಿದ್ದರು. ಅವರು ಸುತ್ತಾಡಿ ಬಂದು ಹೊರಗೆ ಕುಳಿತುಕೊಳ್ಳುತ್ತಿದ್ದರು. ಒಂದು ದಿನ ನಾನು ಅವರೊಂದಿಗೆ ಸುತ್ತಾಡಲು ಹೋಗಿದ್ದೆ. ಭಕ್ತರು ಅಫೀಮು ತಿಂದ ನವಿಲಿನಂತೆ ಅವರ ಬಳಿ



ಬರುತ್ತಿದ್ದರೆ ಮಹಾರಾಜರು ನಗು-ಹಾಸ್ಯಗಳ ಮುಖಾಂತರ ಸತ್ಸಂಗವನ್ನು ಮಾಡುತ್ತಿದ್ದರು. ಕಾಂಕುರಗಾಛಿಯಲ್ಲಿ ಅವರ ಸಾಪ್ತಾಹಿಕ ತರಗತಿಗಳು ಬಹಳವೇ ಮನಮುಟ್ಟುವಂತಿರುತ್ತಿದ್ದವು. ಭಕ್ತರು ಅದೆಷ್ಟು ಪುಣ್ಯವಂತರು! ಅವರಲ್ಲಿ ಕೆಲವರು ಮಹಾರಾಜರ ಎಲ್ಲ ಉಪನ್ಯಾಸಗಳು ಹಾಗೂ ಕ್ಲಾಸಿನಲ್ಲಿ ಹೇಳಿದ ಎಲ್ಲ ವಿಷಯಗಳನ್ನೂ ಟೇಪ್ ಮಾಡಿಕೊಂಡಿದ್ದರಿಂದ –'ಶ್ರೀಶ್ರೀ ರಾಮಕೃಷ್ಣ ಕಥಾಮೃತ ಪ್ರಸಂಗ', 'ಕಠ ಉಪನಿಷದ್', 'ಮುಂಡಕ ಉಪನಿಷದ್' ಹಾಗೂ 'ಶ್ರೀಮದ್ಭಾಗವತ' — ಈ ಅಮೂಲ್ಯ ಗ್ರಂಥಗಳು ತಯಾರಾದವು.

ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿ ಅವರು ಬೇಲೂರು ಮಠಕ್ಕೆ ಹೋದಾಗ ನಾನು ತಮಾಷೆಗೆ ಹೇಳಿದ್ದೆ – ''ನೀವು ಪೆನ್ನು ಹಿಡಿಯದೆಯೆ ಲೇಖಕರಾದಿರಿ. ಮೂರು ಭಾಗವನ್ನು ಮಾತ್ರ ಮುಗಿಸಿದಿರಿ. ಉಳಿದ ಎರಡು ಭಾಗ?'' ಅವರೆಂದರು ''ಕಾಂಕುರಗಾಛಿಯಲ್ಲಿರುತ್ತಿದ್ದರೆ ಮುಗಿಯುತ್ತಿತ್ತು. ಈಗಿನ್ನು ಸಾಧ್ಯವಿಲ್ಲ!'' ನಾನೆಂದೆ, ''ನಿಮ್ಮನ್ನು ಅಧ್ಯಕ್ಷರನ್ನಾಗಿಸಿ ನಮಗೆ ನಷ್ಟವೇ ಆಯಿತು. ಇಲ್ಲವಾದರೆ, ಇನ್ನೂ ಎಷ್ಟೊಂದು ಪುಸ್ತಕಗಳನ್ನು ಬರೆಯಬಹುದಿತ್ತು.'' ಮಹಾರಾಜರು ನಗತೊಡಗಿದರು. ಶಾಸ್ತ್ರದ ದೃಷ್ಟಿಯಲ್ಲಿ ಠಾಕೂರರ ನುಡಿಗಳ ವ್ಯಾಖ್ಯಾನವನ್ನು ಇಷ್ಟು ಸರಳವಾಗಿ ಶ್ರೀರಾಮಕೃಷ್ಣ ಸಂಘದ

ಮತ್ತಾವ ಸಾಧುಗಳೂ ಮಾಡಿಲ್ಲ. ಮಹಾರಾಜರ ಉಪನ್ಯಾಸಗಳನ್ನು ಸಂರಕ್ಷಿಸಲು ನಾನು ಅಮೆರಿಕದಿಂದ ಬರುವವರೊಂದಿಗೆ ಕ್ಯಾಸೆಟ್ ಟೇಪ್‌ಗಳನ್ನು ಕಳುಹಿಸುತ್ತಿದ್ದೆ.

೧೯೮೨ರಲ್ಲಿ ನಾನು ಎರಡನೇ ಬಾರಿ ಭಾರತಕ್ಕೆ ಬಂದೆ. ೩೦.೭.೮೨ರಂದು ಮಹಾರಾಜರನ್ನು ಭೇಟಿಯಾಗಲು ಕಾಂಕುರಗಾಛಿಗೆ ಹೋಗಿದ್ದೆ. ದೀಕ್ಷೆಯ ಸಂಬಂಧವಾಗಿ ಅವರನ್ನು ಅನೇಕ ಪ್ರಶ್ನೆಗಳನ್ನು ಕೇಳಿದ್ದೆ. ಅವರು ಸಂಕ್ಷಿಪ್ತವಾಗಿ ಉತ್ತರಿಸಿದ್ದರು:

''**ತಜ್ಜಪಸ್ತದರ್ಥಭಾವನಮ್** – ಅರ್ಥಾತ್, ಜಪದ ಅರ್ಥವನ್ನು ಅಥವಾ ಇಷ್ಟದೇವತೆಯ ಚಿಂತನೆಯನ್ನು ಮಾಡಬೇಕು. ನಂತರ–ಜಪದೊಂದಿಗೆ ಧ್ಯಾನವನ್ನು ಮಾಡಬೇಕು–ಇದೇ ಮಂತ್ರ ರಹಸ್ಯ.'' 'ಹೇಗೆ?' ಎಂದು ನಾನು ಕೇಳಿದಾಗ ಮಹಾರಾಜರು ಉತ್ತರಿಸಿದರು: ''ಗುಣಸಹಿತವಾಗಿ, ಆತನು ಕರುಣಾಮಯ, ಕೃಪಾಸಿಂಧು, ಪವಿತ್ರತೆಯ ಹಾಗೂ ತ್ಯಾಗದ ಪ್ರತಿಮೂರ್ತಿ. ಗೋಪಿಯರು ಕೃಷ್ಣನನ್ನು ಬಗೆಬಗೆಯಾಗಿ ಧ್ಯಾನಿಸುತ್ತಿದ್ದರು. ಯಾರಿಗೆ ಹೇಗೆ ಇಷ್ಟವೆನಿಸುವುದೋ ಹಾಗೆ. ನಿಜವಾಗಿ ಬೇಕಾದದ್ದು–ಭಗವಂತನು ನಮ್ಮವನೆ, ಎಂಬ ಭಾವನೆ. ತಾಯಿಯು ತನ್ನ ಮಗುವನ್ನು ಪ್ರೀತಿಸುವಂತೆ — ಇದರಲ್ಲಿ ಯಾವುದೇ ದರ್ಶನ, ತತ್ತ್ವ, ಯುಕ್ತಿ ಇಲ್ಲ. ಏಕೆ ಪ್ರೀತಿಸುತ್ತೇನೆ?–ಗೊತ್ತಿಲ್ಲ.

'ಇಷ್ಟ' ಪದವು ಇಷ್ ಧಾತುವಿನಿಂದ ಬಂದಿದೆ. ಭಗವಂತನು ವಾಂಛಿತನು. ನಾನು ಭಗವಂತನನ್ನು ಪಡೆಯಲು ಇಚ್ಛಿಸುತ್ತೇನೆ. ನಾನು 'ಭಗವಂತನಾಗಲು ಇಚ್ಛಿಸುತ್ತೇನೆ'–ಇದೇ ಆದರ್ಶ.

ಮಂತ್ರ–'ಓಂ'(ॐ) ಎಂಬುದು ಬ್ರಹ್ಮದ ಪ್ರತೀಕ, 'ಬೀಜ' ಶಕ್ತಿಯ ಪ್ರತೀಕ. 'ಇಷ್ಟ' ಅವತಾರ ಅಥವಾ ಯಾವುದೇ ದೇವತೆಯ ಪ್ರತೀಕ.

ಕರಜಪ ಪ್ರಶಸ್ತವಾದುದು. ಉಪಾಂಶು ಜಪದಲ್ಲಿ ತುಟಿಗಳು ಸ್ವಲ್ಪ ಅದುರುತ್ತವೆ. ಆದರೆ ಮಾನಸ ಜಪದಲ್ಲಿ ತುಟಿಗಳು ಅದುರುವುದಿಲ್ಲ. ಉಸಿರಾಟದ ಜತೆ ಜತೆಗೆ ಜಪಮಾಡುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಪ್ರತಿದಿನವೂ ನಿರ್ದಿಷ್ಟ ಸಂಖ್ಯೆಯ ಜಪ ಮಾಡುವುದಕ್ಕೆ 'ಪುರಶ್ಚರಣ' ಎನ್ನುತ್ತಾರೆ.

ಜಪದ ಫಲ: ಭಗವತ್ಕೃಪೆಯಿಂದ ಇಚ್ಛೆಗಳು ಈಡೇರುತ್ತವೆ. ಅಭ್ಯುದಯವನ್ನು ಇಚ್ಛಿಸಿದರೆ ಅದೇ ಸಿಗುತ್ತದೆ. ಭಗವಂತನನ್ನು ಇಚ್ಛಿಸಿದರೆ ಭಗವಂತನನ್ನೇ ಪಡೆಯಬಹುದು. ತಾಯಿಯು ಮಗುವಿನ ಆಸೆಗಳನ್ನು ಪೂರೈಸುವಂತೆ ದಯಾಮಯನಾದ ಆತನು ಭಕ್ತನ ಮನೋಭಿಲಾಷೆಯನ್ನು ಪೂರ್ಣಗೊಳಿಸುತ್ತಾನೆ.''

೧೯೮೨ರಲ್ಲಿ ಜಪಾನಿಗೆ ನಾನು ಹೋದೆ. ಆಗಿನ್ನೂ ಜಪಾನಿನ ವೇದಾಂತ ಕೇಂದ್ರ ಬೇಲೂರು ಮಠಕ್ಕೆ ಸೇರಿರಲಿಲ್ಲ. ಜಪಾನಿನಲ್ಲಿ ಮಹಾರಾಜರಿಂದ ದೀಕ್ಷೆ ಪಡೆದ ಅನೇಕ ಭಕ್ತರಿದ್ದಾರೆ. ಮಹಾರಾಜರ ಮೇಲೆ ಅವರಿಗಿದ್ದ ಭಕ್ತಿ–ವಿಶ್ವಾಸವನ್ನು ಕಂಡು ನಾನು ಭಾವಪರವಶನಾದೆ. ೧೪.೧೨.೧೯೮೨ರಂದು ಮಹಾರಾಜರು ಜಲಪಾಯಿಗುಡಿಯಿಂದ ನನಗೆ ಬರೆದಿದ್ದರು: ''ನಿನ್ನನ್ನು ಪಡೆದು ಜಪಾನಿ ಭಕ್ತರು ಬಹಳ ಸಂತೋಷಗೊಂಡಿರುವರೆಂದು ನನಗೆ ಬರೆದಿದ್ದಾರೆ. ಇದನ್ನು ಕಂಡು ಬಹಳ ಆನಂದವಾಯಿತು. ಇದುವರೆಗೆ ಯಾವ ಸಾಧುವನ್ನೂ ಸ್ಥಿರವಾಗಿ ಅಲ್ಲಿಗೆ ಕಳುಹಿಸಲಾಗಿಲ್ಲ. ಅದರಿಂದ ಅವರು ಬಹಳ ದುಃಖಿತರಾಗಿದ್ದಾರೆ.''

೧೯೮೪ರಲ್ಲಿ ಈ ಕೇಂದ್ರವನ್ನು ಬೇಲೂರು ಮಠಕ್ಕೆ ಸೇರಿಸಲಾಯಿತು. ೩.೩.೧೯೮೬ರಂದು ಮಹಾರಾಜರು ಬರೆದರು: ''ನೀನು ಜುಲೈ ತಿಂಗಳಲ್ಲಿ ಬರುವೆಯೆಂದು ತಿಳಿದು ಆನಂದವಾಯಿತು. ಇತ್ತೀಚೆಗೆ ಬಹಳ ಸುತ್ತಾಡುತ್ತಿದ್ದೇನೆ. ಆದರೆ ಜುಲೈಯಲ್ಲಿ ನೀನು ಬಂದಾಗ ನನ್ನನ್ನು ಕಾಣದೆ ಹೊರಟುಹೋಗುವುದಿಲ್ಲವೆಂದು ಆಶಿಸುತ್ತೇನೆ. ನಿನ್ನ ಕಾರ್ಯಕ್ರಮಗಳು ಖಚಿತವಾಗಿ ತಿಳಿದರೆ ಅದಕ್ಕೆ ನಾನು ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ.'' ನನ್ನಂತಹ ಒಬ್ಬ ನಗಣ್ಯ ವ್ಯಕ್ತಿಯ ಮೇಲೆ ಅವರಿಗಿದ್ದ ಅಪರಿಮಿತ ಪ್ರೀತಿಯನ್ನು ನೆನೆದರೆ ಅಲೌಕಿಕ ಆನಂದವುಂಟಾಗುತ್ತದೆ.

ನಾನು ಅನೇಕ ಸಾಧುಗಳನ್ನೂ, ವಿದ್ವಾಂಸರನ್ನೂ ನೋಡಿದ್ದೇನೆ; ಆದರೆ ಇವರಂಥ ಅಸಾಧಾರಣ ಸ್ಮೃತಿಶಕ್ತಿಯುಳ್ಳ ವ್ಯಕ್ತಿಯನ್ನು ಈವರೆಗೆ ನಾನು ನೋಡಿಲ್ಲ. ಆಂಗ್ಲ, ಬಂಗಾಳಿ, ಸಂಸ್ಕೃತ, ಹಿಂದಿ, ಗುಜರಾತಿ ಹಾಗೂ ಇತರ ಭಾಷೆಗಳಲ್ಲಿ ಪಾರಂಗತರಾಗಿದ್ದಂತೆಯೇ, ಅವರಿಗೆ ಪೂರ್ವ ಹಾಗೂ ಪಾಶ್ಚಾತ್ಯ ದರ್ಶನಶಾಸ್ತ್ರಗಳಲ್ಲೂ ಅಪಾರ ಪಾಂಡಿತ್ಯವಿತ್ತು. ಅವರ ಜ್ಞಾನದಾಹ ಅಪಾರವಾಗಿತ್ತು. 'ಜ್ಞಾಪಯಿತುಮಿಚ್ಛಾ'(ಇತರರಿಗೆ ತಿಳಿಸಿಕೊಡುವ ಇಚ್ಛೆ) – ಉಳ್ಳ ಅನೇಕರನ್ನು ನಾವು ಕಾಣುತ್ತೇವೆ. ಆದರೆ 'ಜ್ಞಾತುಮಿಚ್ಛಾ' (ತಿಳಿದುಕೊಳ್ಳುವ ಇಚ್ಛೆ) ಹೆಚ್ಚಿನವರಲ್ಲಿ ಇರುವುದಿಲ್ಲ. ಒಂದು ದಿನ ಭಾಷಾಶಾಸ್ತ್ರವನ್ನು ಕುರಿತು ಚರ್ಚೆ ನಡೆಯಿತು. ಮಹಾರಾಜರೆಂದರು ''ಭಾಷಾಶಾಸ್ತ್ರದ ಪ್ರಕಾರ ಒಂದೇ ಶಬ್ದವು ಸ್ವರಕ್ಕನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು ಕೊಡಬಲ್ಲದು. ಉದಾಹರಣೆಗೆ (೧) ಮಗು ಶಾಲೆಗೆ ಹೋಗಬೇಕು. ತಾಯಿಗೆ ಹೇಳುತ್ತದೆ? ''ಅಮ್ಮಾ, ನಾನು ಶಾಲೆಗೆ ಹೋಗುತ್ತೇನೆ.'' ತಾಯಿ ಹೇಳುತ್ತಾಳೆ, ''ಹೋಗು'' ಇಲ್ಲಿ ಸ್ವರವು ಮೃದುವಾಗಿರುತ್ತದೆ. ಅನುಮತಿ ನೀಡುವ ಸ್ವರ. (೨) ಮನೆಯೊಳಗೆ ದುಷ್ಟನೊಬ್ಬ ನುಗ್ಗುತ್ತಿದ್ದಾನೆ. ಅದೇ ಮಹಿಳೆ ಕಿರುಚುತ್ತ 'ಹೋಗು' ಎನ್ನುತ್ತಾಳೆ. ಇಲ್ಲಿ 'ಹೋಗು' ಎಂದರೆ 'ದೂರ ತೊಲಗು' ಎಂದರ್ಥ. ಕಟು ಸ್ವರ. (೩) ಮತ್ತೆ ಪ್ರೇಯಸಿಯೊಬ್ಬಳು ತನ್ನ ಪ್ರಿಯತಮನಿಗೆ ಹೇಳುತ್ತಾಳೆ, 'ಹೋ–ಗು.' ಇಲ್ಲಿ 'ಹೋಗು' ಎಂದರೆ 'ಹೋಗಬೇಡ.' ಮಹಾರಾಜರು ಅಣಕಿಸುತ್ತ ಹೀಗೆ ಹೇಳಿದಾಗ, ನನಗೆ ಹೊಟ್ಟೆ ಹುಣ್ಣಾಗುವಷ್ಟು ನಗು ಬಂತು. ಮತ್ತೊಂದು ದಿನ ಮಾತಿನ ನಡುವೆ ನನ್ನೊಡನೆ ನಮ್ಮ ಗ್ರಾಮದ ಭಾಷೆಯಲ್ಲಿ ಅವರು ಮಾತನಾಡಿದಾಗ ನಾನು ಅವಾಕ್ಕಾದೆ.

ಒಮ್ಮೆ ಬೇಲೂರು ಮಠದಲ್ಲಿ ತಿರುಗಾಡುತ್ತ ಗಂಗೆಯ ತರಂಗಗಳು, ವರಾಹನಗರದ ವೃಕ್ಷರಾಜಿ, ನೀಲ ಮೇಘಗಳನ್ನು ನೋಡಿ ಕಾಳಿದಾಸನ 'ರಘುವಂಶ'ದ ಶ್ಲೋಕವನ್ನು ಉಲ್ಲೇಖಿಸುತ್ತ 'ದೂರಾದಯಶ್ಚಕ್ರನಿಭಸ್ಯತನ್ವೀ' ಎಂದಾಗ, ಅವರು ಕೂಡಲೇ ''ನೀನು ತಪ್ಪಾಗಿ ಹೇಳುತ್ತಿದ್ದೀಯ' ಎಂದು ಅದನ್ನು ತಿದ್ದುತ್ತ ಶ್ಲೋಕವನ್ನು ಪೂರ್ತಿಯಾಗಿ ಹೇಳಿದರು :

**ದೂರದಯಶ್ಚಕ್ರನಿಭಸ್ಯ ತನ್ವೀ**
**ತಮಾಲತಾಲೀವನರಾಜಿನೀಲಾ।**
**ಆಭಾತಿ ವೇಲಾ ಲವಣಾಂಬುರಾಶೇ**
**ರ್ಧಾರಾನಿಬದ್ಧೇವ ಕಲಂಕರೇಖಾ॥** *(೧೩ನೆ ಸರ್ಗ, ೧೫)*

ನಾನು ಆಶ್ಚರ್ಯಚಕಿತನಾದೆ. ಎಂದೋ ಓದಿದ್ದು ಇಂದಿಗೂ ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಿದ್ದಾರೆ! ಮತ್ತೆ ಮತ್ತೆ ಓದಿದರೂ ನಮಗೆ ಶಾಸ್ತ್ರಗಳ ಶ್ಲೋಕಗಳನ್ನು ನೆನಪಿಡಲು ಸಾಧ್ಯವಿಲ್ಲ. ಗೀತೆ, ಉಪನಿಷತ್ತುಗಳು, ಭಾಗವತ ಮುಂತಾದ ಶಾಸ್ತ್ರಗಳೂ, ಅವುಗಳ ಭಾಷ್ಯಗಳೂ ಬಳಕೆಯಲ್ಲಿರುವ ಗಾದೆಗಳೂ, ಪ್ರವಚನಗಳೂ ಬಿರುಸು-ಬಾಣದ ನಕ್ಷತ್ರಗಳಂತೆ ಸ್ಪಷ್ಟವಾಗಿ ಅವರ ಬಾಯಿಂದ ಹೊರಹೊಮ್ಮುತ್ತಿದ್ದವು. ಅವುಗಳನ್ನು ಉಲ್ಲೇಖಿಸುವಾಗ ಯಾವುದೇ ಅಸಂಬದ್ಧತೆ ಅಥವಾ ತಪ್ಪುಗಳು ಇರುತ್ತಿರಲಿಲ್ಲ. ಅವರ ಕೋಣೆಯಲ್ಲಿ ಹೆಚ್ಚಿನ ಪುಸ್ತಕಗಳನ್ನಾಗಲಿ, ಅವರು ನಮ್ಮಂತೆ ಓದುತ್ತಿದ್ದುದನ್ನಾಗಲಿ ನಾನು ನೋಡಿಲ್ಲ. ಒಂದು ದಿನ ನಾನು ಅವರನ್ನು ಕೇಳಿದೆ, ''ಒಂದು ಉಪನ್ಯಾಸಕ್ಕೆ ತಯಾರಾಗಲು ನನಗೆ ಎಷ್ಟು ಸಮಯ ಬೇಕಾಗುತ್ತದೆ! ನೀವು ಯಾವುದೇ ಪೂರ್ವಸಿದ್ಧತೆ ಅಥವ ನೋಟ್ಸ್ ಇಲ್ಲದೆ ಅದೆಷ್ಟು ಚೆನ್ನಾಗಿ ಭಾಷಣ ಮಾಡುತ್ತೀರಲ್ಲ! ನಿಮ್ಮ ಚಿಂತನೆಗಳನ್ನು ಎಷ್ಟು ಸೊಗಸಾಗಿ ಹೊಂದಾಣಿಕೆ ಮಾಡುತ್ತೀರಲ್ಲ!'' ಪ್ರತಿದಿನವೂ ಅವರ ಸೇವಕರು ಅವರೆದುರು ಶ್ರೀಮದ್ಭಾಗವತ ಹಾಗೂ ಶ್ರೀರಾಮಕೃಷ್ಣ-ವಿವೇಕಾನಂದರ ಸಾಹಿತ್ಯವನ್ನು ಓದುತ್ತಿದ್ದರೆ ಅವರು ಕಣ್ಣುಮುಚ್ಚಿ ಆಲಿಸುತ್ತಿದ್ದರು. ನಾನು ಬೇಲೂರು ಮಠಕ್ಕೆ ಹೋಗಿ, ಸಂಜೆ ೩.೩೦ಕ್ಕೆ ಚಹಾ ಕುಡಿಯಲು ಹೋದಾಗ ಅವರ ಹತ್ತಿರ ಹೋಗಿ ಇವುಗಳನ್ನು ಕೇಳಿಸಿಕೊಳ್ಳುತ್ತಿದ್ದೆ, ಅವರೊಡನೆ ಸಂಭಾಷಿಸುತ್ತಿದ್ದೆ.

ಬೇಲೂರು ಮಠದಲ್ಲಿ ಇದ್ದಷ್ಟು ದಿನಗಳೂ ಬೆಳಗ್ಗೆ ಅವರೊಡನೆ ತಿರುಗಾಡುತ್ತಿದ್ದೆ. ಇತರ ಸಾಧುಗಳೂ ಇರುತ್ತಿದ್ದರು. ಅವರು ಎಲ್ಲರಿಗೂ 'ಚಾಕಲೇಟ್' ಕೊಡುತ್ತಿದ್ದರು. ವಿನೋದವನ್ನೂ ಮಾಡುತ್ತಿದ್ದರು. ಒಮ್ಮೆ ಮಠದ ಪ್ರಾಣಗೋಪಾಲ ಮಹಾರಾಜರು ತುಂಬ ಭಕ್ತಿಯಿಂದ ಪ್ರಣಾಮ ಮಾಡಿ ತಮ್ಮ ಎರಡೂ ಕೈಗಳನ್ನೂ ಚಾಚಿದರು. ನಾನೆಂದೆ, ''ಮಹಾರಾಜ್ ನೋಡಿ. ಪ್ರಾಣಗೋಪಾಲ ಮಹಾರಾಜರಿಗೆ ಅದೆಷ್ಟು ಭಕ್ತಿ!'' ಅವರು ಅದಕ್ಕೆ, ''ಅವನು ಶಕುನಿ, ಅವನ ದೃಷ್ಟಿ ಚಾಕಲೇಟಿನ ಮೇಲೆ!'' ಎಂದರು. ಮಹಾರಾಜರು ಸದಾ ಆನಂದದಿಂದಿರುತ್ತಿದ್ದರು. ತಾವೂ ಮನಸಾರೆ ನಗುತಿದ್ದು, ಇತರರನ್ನೂ ನಗಿಸುತ್ತಿದ್ದರು. ಈ ಹಾಸ್ಯಪ್ರಜ್ಞೆ ಅವರನ್ನೆಂದಿಗೂ ವೃದ್ಧರಾಗಲು ಬಿಡಲಿಲ್ಲ; ಸದಾ ಯುವಕರಂತಿದ್ದರು.

೧೯೯೧ರಲ್ಲಿ ನಾನು ಲ್ಯಾಂಗುವಾದಲ್ಲಿ ಹರಿ ಮಹಾರಾಜರ (ಸ್ವಾಮಿ ತುರೀಯಾನಂದರ) ಪತ್ರಗಳನ್ನು ಆಂಗ್ಲ ಭಾಷೆಗೆ ಅನುವಾದಿಸಲು ಪ್ರಾರಂಭಿಸಿದೆ. ನಂತರ ಅದು 'Spritual Treasures' ಎಂಬ ಹೆಸರಿನಲ್ಲಿ ಬಿಡುಗಡೆಯಾಯಿತು. ಅವರಿಗೆ ಇದನ್ನು ತಿಳಿಸಿದಾಗ ೭.೮.೯೧ರಂದು ಉತ್ತರಿಸಿದರು, ''ನೀನು ಹರಿ ಮಹಾರಾಜರ ಪತ್ರಗಳನ್ನು ತರ್ಜುಮೆ ಮಾಡಿರುವೆಯೆಂದು ತಿಳಿದು ಸಂತೋಷಗೊಂಡೆ. ಹರಿ ಮಹಾರಾಜರ ಪತ್ರಗಳು ಅತ್ಯಂತ ಸ್ಫೂರ್ತಿದಾಯಕ ಎಂದು ನನಗನ್ನಿಸುತ್ತದೆ. ವಿಶೇಷವಾಗಿ, ಶಾಸ್ತ್ರಜ್ಞಾನವುಳ್ಳವರಿಗೆ ಈ ಪತ್ರಗಳ ಮರ್ಮವು ಅತ್ಯಂತ ಮಹತ್ವಪೂರ್ಣದ್ದಾಗಿರುವುದು. ಶಾಸ್ತ್ರಜ್ಞಾನವಿಲ್ಲದಿದ್ದರೂ ಎಲ್ಲರಿಗೂ ಅವರ ತ್ಯಾಗಜೀವನದ ಕಲ್ಪನೆ ಸಿಗುತ್ತದೆ. ಅದು ಎಲ್ಲರಿಗೂ, ವಿಶೇಷವಾಗಿ, ನಮಗೆ ತ್ಯಾಗದ ಪಥದಲ್ಲಿ ಮುನ್ನಡೆಯಲು ಪ್ರೇರಣೆಯನ್ನೂ, ಮಾರ್ಗದರ್ಶನವನ್ನೂ ನೀಡುತ್ತದೆ. ಶ್ರೀ ಠಾಕೂರರ ಕೃಪೆಯಿಂದ ನಿನ್ನ ಈ ಪ್ರಯತ್ನವು ಸಾರ್ಥಕವಾಗಲೆಂದು ಪ್ರಾರ್ಥಿಸುತ್ತೇನೆ.''

* * *

ಮಹಾರಾಜರು ಪ್ರತಿದಿನ ಬೆಳಗ್ಗೆ ತಿಂಡಿಯ ನಂತರ ೧೫ ನಿಮಿಷಗಳ ಕಾಲ ಸಾಧು-ಬ್ರಹ್ಮಚಾರಿಗಳಿಗೆ ದರ್ಶನ ಕೊಡುತ್ತಿದ್ದು ಅವರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಬೇಲೂರು ಮಠದಲ್ಲಿ ನಾನಿದ್ದಷ್ಟು ದಿನಗಳು ಹೆಚ್ಚಾಗಿ ಮಹಾರಾಜರ ಪದತಲದಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದೆ. ಆ ಪ್ರಶ್ನೋತ್ತರಗಳನ್ನು ಸ್ವಾಮಿ ವರಾನಂದ ಹಾಗೂ ಸ್ವಾಮಿ ಋತಾನಂದರು ಟೇಪ್ ಮಾಡಿಟ್ಟುಕೊಂಡಿದ್ದಾರೆ. ಈ ಸಂಭಾಷಣೆಗಳಲ್ಲಿ ಕೆಲವು ಪ್ರಶ್ನೋತ್ತರಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ:

**ನಾನು:** ಮಹಾರಾಜ್, ಕಳೆದ ವಾರ ನಾವು ಒಂಬತ್ತು ಜನ ಸಾಧುಗಳು ಸ್ಯಾನ್‌ಫ್ರಾನ್ಸಿಸ್ಕೋದ ಕಾನ್ವೆಂಟ್‌ಗೆ ಹೋದಾಗ ಒಬ್ಬ ಸಂನ್ಯಾಸಿನಿ ಕೇಳಿದರು, 'ಸಂನ್ಯಾಸಿ ಜೀವನದಲ್ಲಿ ಅತ್ಯಂತ ಆವಶ್ಯಕವಾಗಿ ಇರಬೇಕಾದ ಸಂಗತಿ ಏನು?' ಅಂತ. ಒಂಬತ್ತು ಮಂದಿ ಸಾಧುಗಳು ಒಂಬತ್ತು ರೀತಿಯ ಉತ್ತರಗಳನ್ನು ನೀಡಿದೆವು. ಈ ವಿಷಯವಾಗಿ ನೀವೇನು ಹೇಳುತ್ತೀರಿ?

**ಮಹಾರಾಜ್:** ಈ ಸಾಧುಗಳು ಏನು ಹೇಳಿದರೆಂಬುದನ್ನು ಮೊದಲು ಹೇಳು.

**ನಾನು:** ಒಬ್ಬರು, 'ಮಾನವೀಯತೆ ಮತ್ತು ವಿಧೇಯತೆ' ಎಂದರು. ಇನ್ನೊಬ್ಬರು 'ತ್ಯಾಗ ಮತ್ತು ಪರಿಶುದ್ಧತೆ' ಎಂದರು. ಮತ್ತೊಬ್ಬರು, 'ಸಾಕ್ಷಾತ್ಕಾರ', ಮತ್ತೆ ಒಬ್ಬರು 'ವ್ಯಾಕುಲತೆ ಮತ್ತು ತಪಸ್ಸು' ಎಂದರು. ಯಾರೋ ಒಬ್ಬರು, 'ರಾಮಕೃಷ್ಣ- ವಿವೇಕಾನಂದರ ಆದರ್ಶ' ಇತ್ಯಾದಿಯಾಗಿ ಹೇಳಿದೆವು.

**ಮಹಾರಾಜ್:** ಈ ಎಲ್ಲ ಗುಣಗಳನ್ನು ಸೇರಿಸಿದರೆ ಸಾಧುಗಳ ಆದರ್ಶವಾಗುವುದು ಎಂಬುದೇ ನನ್ನ ಉತ್ತರ.

**ನಾನು:** ೧೯೭೭ರಲ್ಲಿ ನಾನು ಕಾಶಿಯ ಬುದ್ಧ ಮಹಾರಾಜ (ಸ್ವಾಮಿ ಭಾಸ್ವರಾನಂದಜಿ)ರನ್ನು ಕೇಳಿದೆ, ರಾಜಾ ಮಹಾರಾಜರು ಅವರಿಗೆ ಏನು ಉಪದೇಶ ನೀಡಿದ್ದರೆಂದು. ಅವರು ನಗುತ್ತ 'ಸತ್ಯ ಮತ್ತು ಬ್ರಹ್ಮಚರ್ಯ–ಇವೆರಡನ್ನು ಪಾಲಿಸಿದರೆ ಬೇಕಾದಷ್ಟಾಯಿತು' ಎಂಬ ಉಪದೇಶ ನೀಡಿದ್ದರು ಎಂದರು.

**ಮಹಾರಾಜ್:** ''ಬ್ರಹ್ಮಚರ್ಯ'' ಎಂದರೇನೆಂದು ಗೊತ್ತೇನು? ಕೇವಲ celibacy ಮಾತ್ರವೆ ಬ್ರಹ್ಮಚರ್ಯವಲ್ಲ. ಬೇಕಾದಷ್ಟು ಮಂದಿ ನಪುಂಸಕರಿದ್ದಾರೆ. ಅವರೆಲ್ಲ ಬ್ರಹ್ಮಚಾರಿಗಳೆ? ಎನ್ನುತ್ತ ಮೀರಾಭಜನೆಯನ್ನು ವಾಚನ ಮಾಡಿದರು :

**ಸಾಧನ ಕರನಾ ಚಾಹಿಯೆ ಮನುವಾ ಭಜನ ಕರನಾ ಚಾಯ್ ।**
**ಪ್ರೇಮ ಲಗಾನಾ ಚಾಹಿಯೆ ಮನುವಾ ಪ್ರೀತ್ ಕರನಾ ಚಾಯ್ ॥**
**ತಿರಣ ಬಖನೇ ಸೇ ಹರಿ ಮಿಲೇ ತೋ ಬಹುತ್ ಮೃಗೀ ಅಜಾ ।**
**ಸ್ತ್ರೀ ಛೋಡನೇ ಸೇ ಹರಿ ಮಿಲೇ ತೋ**
**ಬಹುತ್ ರಹೇ ಹೈ ಖೋಜಾ ॥**
**ಮೀರಾ ಕಹೇ ಪ್ರಭು ಬಿನಾ ಪ್ರೇಮ ಸೆ ನಹೀಂ ಮಿಲೆ ನಂದಲಾಲಾ ॥**

**ನಾನು:** ಮಹಾರಾಜ್, 'ಠಾಕೂರರನ್ನು ನಾವು ನೋಡಿಲ್ಲ. ಅವರನ್ನು ಪ್ರೀತಿಸುವುದು ಹೇಗೆ? ಅವರೊಡನೆ ಸಂಬಂಧವನ್ನು ಬೆಳೆಸಿಕೊಳ್ಳುವುದು ಹೇಗೆ?', ಎಂದು ಪಾಶ್ಚಾತ್ಯರಲ್ಲಿ ಅನೇಕರು ಕೇಳುತ್ತಾರೆ.

**ಮಹಾರಾಜ್:** ರಾಮಕೃಷ್ಣರು ನಿನ್ನ ಆತ್ಮವೇ, ಆದ್ದರಿಂದ ನೀನು ಅವರನ್ನು ಪ್ರೀತಿಸದಿರಲು ಸಾಧ್ಯವೇ ಇಲ್ಲ. ಭಗವಂತನು ಸರ್ವರ ಆತ್ಮ. ನಿನ್ನ ಮೇಲೆ ನಿನಗೆ ಪ್ರೀತಿಯಿಲ್ಲವೆ? ''ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ, ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ। ನ ವಾ ಅರೇ ವಿತ್ತಸ್ಯ ಕಾಮಾಯ ವಿತ್ತಂ ಪ್ರಿಯಂ ಭವತಿ, ಆತ್ಮನಸ್ತು ಕಾಮಾಯ ವಿತ್ತಂ ಪ್ರಿಯಂ ಭವತಿ।'' (ಹೇ ಪ್ರಿಯೆ, ಪತಿಗೋಸ್ಕರ ಪತಿಯು (ಸತಿಗೆ) ಪ್ರಿಯನಲ್ಲ; ತನಗಾಗಿಯೆ (ಪತ್ನಿಗಾಗಿ) ಪತಿಯು ಪ್ರಿಯನು. ಧನಕ್ಕೋಸ್ಕರ ಧನವು ಪ್ರಿಯವಲ್ಲ, ಆತ್ಮಕ್ಕಾಗಿಯೆ ಧನವು ಪ್ರಿಯವು. *(ಬೃಹದಾರಣ್ಯಕ ಉಪನಿಷತ್ತು, ೨.೪.೫)*

* * *

### ೧೧ ಜನವರಿ ೧೯೯೬, ಬೇಲೂರು ಮಠ, ಬೆಳಗ್ಗೆ ೭.೪೫

ಮಹಾರಾಜರು ಪೂಜ್ಯ ಗಂಗಾಧರ ಮಹಾರಾಜರ (ಸ್ವಾಮಿ ಅಖಂಡಾನಂದಜಿ) ಒಂದು ಸಣ್ಣ ಸ್ಮೃತಿಕತೆಯನ್ನು ಹೇಳಿದರು. ಒಂದು ದಿನ ಭೂತೇಶಾನಂದರು ಮಠದ ದಕ್ಷಿಣ ದಿಕ್ಕಿನ ಚಿಕ್ಕ ಗೇಟನ್ನು ದಾಟಿ ಒಳಗೆ ಬರುತ್ತಿದ್ದರು. ಅವರ ಹಿಂದೆ ಹುಚ್ಚನೊಬ್ಬ ಹೆಗಲಲ್ಲಿ ಚೀಲವನ್ನು ಹೊತ್ತು ಗೇಟನ್ನು ಮೇಲೆತ್ತಿ ಒಳಹೊಗಲು ಪ್ರಯತ್ನಿಸುತ್ತಿದ್ದ. ಮಠದ ಮಹಡಿಯ ವರಾಂಡದಿಂದ ಇದನ್ನು ಕಂಡ ಗಂಗಾಧರ ಮಹಾರಾಜರು ಭೂತೇಶಾನಂದಜಿಗೆ ಹೇಳಿದರು, ''ನಿನ್ನ ಹಿಂದೆ ಯಾರು ಬರುತ್ತಿರುವರೆಂದು ಗಮನಿಸಲಿಲ್ಲವೆ? ಅವನು ಹುಚ್ಚನಿರಬಹುದು. ಆದರೆ ನೀನೇಕೆ ಅವನಿಗೆ ನೆರವಾಗಲಿಲ್ಲ?'' ವಿನೀತರಾಗಿ ಭೂತೇಶಾನಂದಜಿಯವರು ಉತ್ತರಿಸಿದರು, ''ಮಹಾರಾಜ್, ನನ್ನಿಂದ ತಪ್ಪಾಯಿತು.'' ನಮ್ಮ ತಪ್ಪನ್ನು ಒಪ್ಪಿ ಅದನ್ನು ತಿದ್ದಿಕೊಳ್ಳುವುದು ಸಾಧು-ಜೀವನದಲ್ಲಿ ಅತ್ಯಗತ್ಯವೆಂದು ಮಹಾರಾಜರು ನಮಗೆ ಕಲಿಸಿದರು.

**ಒಬ್ಬ ಸಾಧು:** ಮಹಾರಾಜ್, ಶರತ್ ಮಹಾರಾಜರಿಗೆ ಸಂಬಂಧಿಸಿದ ಯಾವುದಾದರೂ ಘಟನೆಯನ್ನು ಹೇಳಿ.

**ಮಹಾರಾಜ್:** ಬೇಲೂರು ಮಠದಲ್ಲಿ ಶ್ರೀಮಾತೆಯವರ ಪಾರ್ಥಿವ ಶರೀರದ ಅಂತಿಮ ಸಂಸ್ಕಾರದ ಬಳಿಕ ಕೆಲವು ಭಕ್ತರು ಅವರ ಅಸ್ಥಿಯನ್ನು ಸಂಗ್ರಹಿಸುತ್ತಿದ್ದರು. ಅದನ್ನು ಗಮನಿಸಿದ ಶರತ್ ಮಹಾರಾಜರು ತೀಕ್ಷ್ಣ ಧ್ವನಿಯಲ್ಲಿ ಕೂಗಿ ಹೇಳಿದರು– ''ಶ್ರೀಮಾತೆಯವರ ಅಸ್ಥಿಯನ್ನು ತೆಗೆದುಕೊಂಡವರು ಪ್ರತಿದಿನವೂ ಅತ್ಯಂತ ಶ್ರದ್ಧಾಪೂರ್ವಕವಾಗಿ ಅದನ್ನು ಪೂಜಿಸದಿದ್ದರೆ ಅವರ ಸ-ರ್ವ-ನಾ-ಶ ವಾಗುತ್ತದೆ.'' ನಾನೆಂದೂ ಅವರ ಅಷ್ಟು ಗಟ್ಟಿಯಾದ ಸ್ವರವನ್ನು ಕೇಳಿರಲಿಲ್ಲ. ಅಸ್ಥಿಯನ್ನು ಸಂಗ್ರಹಿಸಿದವರೆಲ್ಲ ಹೆದರಿ ಅದನ್ನು ಸಮಾಧಿ ಸ್ಥಳದಲ್ಲಿ ಇಟ್ಟುಬಿಟ್ಟರು.

* * *

### ೧೨ ಜನವರಿ ೧೯೯೬, ಬೇಲೂರು ಮಠ, ಬೆಳಿಗ್ಗೆ ೭.೪೫

**ನಾನು:** ಪಾಶ್ಚಾತ್ಯನೊಬ್ಬನು ತಾನು ವೇದಾಂತವನ್ನು ಕಲಿಯಬೇಕೆಂದು ನಿಮಗೆ ಹೇಳಿದರೆ ಯಾವ ಪುಸ್ತಕವನ್ನು ನೀವು ಓದಲು ಹೇಳುವಿರಿ?

**ಮಹಾರಾಜ್:** ಸ್ವಾಮೀಜಿಯವರ ಕೃತಿಗಳು. ವಿಶೇಷವಾಗಿ 'ಜ್ಞಾನಯೋಗ'ವನ್ನು.

**ನಾನು:** ಸಾಧುವಿನ ಆಚರಣೆ ಹೇಗಿರಬೇಕು?

**ಮಹಾರಾಜ್:** ನಿಜವಾದ ಸಾಧುವು ಇತರರಿಗೆ ಸಂತೋಷವನ್ನು ಕೊಡುತ್ತಾನೆ. ಅವನು ತನ್ನ ಆಧ್ಯಾತ್ಮಿಕ ಆನಂದದ ಅಂಶವನ್ನು ಎಲ್ಲರಿಗೂ ನೀಡುವನು. '**ಶಾಂತಾ ಮಹಾಂತೋ ನಿವಸಂತಿ ಸಂತೋ ವಸಂತವಲ್ಲೋಕಹಿತಂ ಚರಂತಃ**' *(ವಿವೇಕ ಚೂಡಾಮಣಿ, ೩೭)* ನಿಜವಾದ ಸಾಧುವು ಕೇವಲ ಭಗವಂತನನ್ನು ಕುರಿತು ಮಾತನಾಡುತ್ತಾನೆ. ಮನಸ್ಸು ಕೆಳಗಿಳಿದರೆ ಜಗಳಗಳು ಪ್ರಾರಂಭವಾಗುತ್ತವೆ. ಸದಾ-ಸರ್ವದಾ ಮನಸ್ಸನ್ನು, ಕೇವಲ ಆನಂದ ಹಾಗೂ ಏಕತೆ ಇರುವ ಮೇಲಿನ ಸ್ತರದಲ್ಲಿ ಇರಿಸಿಕೊಳ್ಳಬೇಕು.

ಶ್ರೀ ಮ-ಅವರನ್ನು ಯಾರಾದರೂ ಠಾಕೂರರ ವಿಷಯದ ಕುರಿತು ಹೇಳಲು ಕೇಳಿಕೊಂಡರೆ ಅವರು, ''ನಾನು ಅವರ ಬಗ್ಗೆ ಮಾತ್ರವೇ ತಿಳಿದಿರುವೆ. ಅವರ ಬಗ್ಗೆಯೆ ಮಾತನಾಡುತ್ತೇನೆ,'' ಎನ್ನುತ್ತಿದ್ದರು.

*(ಮುಂದಿನ ಸಂಚಿಕೆಗೆ)*